ಪ್ರಶಾಂತ್ ಮಯ್ಯ, ಸಾಗರ
◆ ಹುಟ್ಟಿನ ಸಾವು ಎಂದು ರಾಂ?



ಸ್ಕ್ಯಾನಿಂಗ್ ಮಾಡಿ ಹೆಣ್ಣೆಂದು ತಿಳಿದಾಗ ಅಬಾರ್ಷನ್ ಮಾಡುವಂದು.

ಕೆ.ವಿ.ಎಸ್. ಕಾಳೀಹುಂಡಿ, ಮೈಸೂರು
◆ ಈ ಜನ್ಮದಲ್ಲಿಯೇ ಎಲ್ಲ ಋಣಗಳನ್ನೂ ತೀರಿಸಬೇಕಾದರೆ ಏನು ಮಾಡಬೇಕು?
'ಬಡ್ಡಿ ಹೈದ' ಆಗದೆ 'ಅಸಲು ಮಾನವ'ನಾಗಿ ಜೀವಿಸಿದರೆ ಸಾಕು.

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
◆ ವೈಎನ್‌ಕೆ, ಬೀಚಿ, ಕೈಲಾಸಂ, ನವರತ್ನರಾಂ, ಇವರೆಲ್ಲ ಸೇರಿ ರಾಮ್ ಆಗಿದ್ದಾರೆ ಎನಿಸುತ್ತಿದೆಯಲ್ಲಾ...?
ಅದೇ ಉಸ್ತಾದುಗಳ ಗರಡಿಯ ಶಿಷ್ಯೆಯಲ್ಲವೇ... ಅಲ್ಲೊಂದು ಇಲ್ಲೊಂದು ಝಲಕ್ ಕಂಡೀತಷ್ಟೆ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ
◆ ಈ ಭೂಮಿಯೆಲ್ಲ ಬಂಗಾರವಾಗಿದ್ದರೆ ಹೇಗಿರುತ್ತಿತ್ತು ರಾಮ್ ಸರ್?



ಇಡೀ ಭೂಮಿಗೇ ಕಾಮಾಲೆ ರೋಗ ಬಂದಂತಿರುತ್ತಿತ್ತು.

ರತ್ನಜ, ಮೈಸೂರು
ಜೈಲಿಗೆ ಹೋಗುವಾಗಲೂ ರಾಜಕಾರಣಿಗಳು
◆ ಕೈ ಬೀಸುತ್ತಾ ನಗುನಗುತ್ತಾ ತೆರಳುವರಲ್ಲ ರಾಂಜೀ...?
ಅಲ್ಲಿಂದಲೇ ಬಂದವರಲ್ಲವೆ; ಜೈಲೆಂದರೆ ಅವರಿಗೆ ತವರಿನ ಸಂಭ್ರಮ.

ಫಾಲನೇತ್ರ ಸಜ್ಜನ, ಶಿರಸಿ
◆ ಮಾತನಾಡಲು ಶ್ರೇಷ್ಠ ಸಮಯ ಯಾವುದು?
ಕೇಳುಗನಲ್ಲಿ ಆಸಕ್ತಿ, ಹೇಳುವವನಲ್ಲಿ ಆ ಶಕ್ತಿ ಇರುವ ಸಮಯ.

ಪಿ. ಚಿದಾನಂದ, ಜವನಗೊಂಡನಹಳ್ಳಿ
◆ ಬದುಕು ಭಾರವೆನಿಸಿದಾಗ ಹಗುರಾಗಲು ಏನು ಮಾಡಬೇಕು?
'ಬಾರಾ...' ಎಂದು ಕರೆಯುವವರ ಬಳಿ ಮನಸ್ಸಿನ ಭಾರ ಇಳಿಸಿಕೊಳ್ಳಬೇಕು.

ಪದ್ಮಾ ಕೃಷ್ಣಮೂರ್ತಿ, ತುಮಕೂರು
◆ ಇತ್ತೀಚೆಗೆ ರಾಜಕಾರಣಿಗಳು ಸಭೆ ಸಮಾರಂಭಗಳಲ್ಲಿ ಅಳಲು ಶುರು ಮಾಡುತ್ತಾರಲ್ಲಾ...?
ಹೆಗಲ ಮೇಲಿನ ಟವಲ್ಲಿಗೆ ಅಮೃತಾಂಜನ ಬಳಿದಿರುವ ಪ್ರಭಾವವಂತೆ.

ರತ್ನ ಸತ್ಯೇಂದ್ರ, ಬೆಂಗಳೂರು
◆ ಪ್ರತಿದಿನ ನೋವು ಅನುಭವಿಸುವ ಹೆಣ್ಣಿಗೆ ನಿಮ್ಮ ಸಲಹೆ ಏನು?
ಸಂಜೆ ಆರರಿಂದ ಹತ್ತರವರೆಗೆ ಟೀವಿ ಆಫ್ ಮಾಡಿ.

ಪಿ.ಜಿ. ರಾಜ್, ಶಿವಮೊಗ್ಗ
◆ ಮಾತು ಬೆಳ್ಳಿ; ಮೌನ ಬಂಗಾರ. ನಗು?
ಬೆಳ್ಳಿ, ಬಂಗಾರಗಳೆರಡಕ್ಕೂ ಹೊಂದುವಂತಹ ಪಚ್ಚೆ.

ಅಜಯ್, ಬೆಂಗಳೂರು
◆ ದಾಸರು ಕೃಷ್ಣನನ್ನು ಹಾಡಿ ಸ್ತುತಿಸಿದರು; ಶರಣರು ಶಿವನನ್ನು ಸ್ತುತಿಸಿದರು; ಆಧುನಿಕ ಕವಿಗಳು?
ಪೀಠ, ಸವಲತ್ತಿಗಾಗಿ ಹೈಕಮಾಂಡುಗಳನ್ನು ಸ್ತುತಿಸಿದರು.

ರವಿ ಎಂ. ಪೈ, ಹೊನ್ನಾವರ
◆ ಚಿತ್ರಕ್ಕೂ, ಸ್ತಬ್ಧಚಿತ್ರಕ್ಕೂ ಏನು ವ್ಯತ್ಯಾಸ?
ಸುಂದರಿ ಹೊರಗೆ ಸುಳಿದಾಡುವ ಸಮಯದಲ್ಲಿ ಚಿತ್ರ, ಬ್ಯೂಟಿ ಪಾರ್ಲರ್‌ನಲ್ಲಿ ಸ್ತಬ್ಧ ಚಿತ್ರ.

ಜೆ.ಆರ್.ಆದಿನಾರಾಯಣಮುನಿ, ಬೆಂಗಳೂರು
◆ ಮದುವೆಯಾದ ಮೇಲೆ ಸಂತೋಷವೆಂಬುದು ಎಷ್ಟು ಸತ್ಯ?
ಅಪ್ಪಟ ಸತ್ಯ. ಆದರೆ ವಧುವರರದಲ್ಲ, ಕ್ಯಾಂಡಿಡ್ ಫೋಟೊ ತೆಗೆದವರದು.

## ಬಹುಮಾನಿತ ಪ್ರಶ್ನೆ

ರಮೇಶ್, ಹನುಮನಾಳು
◆ ಬಡವರ ಮನೆಯ ಊಟ ಚೆನ್ನ ಅನ್ನುತ್ತಾರೆ. ಕರೆದರೆ ಬರುತ್ತಿಲ್ಲವಲ್ಲ....?
ಪಾಪ! ಅವರ ಹೊಟ್ಟೆಯ ಸುತ್ತಳತೆ ಇವರ ಮನೆಯ ಬಾಗಿಲಿಗಿಂತ ದೊಡ್ಡದಿದೆಯಂತೆ.

ನರಸಿಂಹ ಪೈ, ಹೊನ್ನಾವರ
◆ ಶರಬತ್ತಿಗೂ ಶರಾಬಿಗೂ ಏನು ಅಂತರ?
ಒಂದು ದ್ರವ; ಇನ್ನೊಂದು ಉಪದ್ರವ.

ಸಿ.ಎನ್. ವಿಜಯಲಕ್ಷ್ಮಿ, ಶಿವಮೊಗ್ಗ
◆ ಕೆಲ ಸನ್ಯಾಸಿಗಳು, ಸ್ವಾಮೀಜಿಗಳು, ಜ್ಯೋತಿಷಿಗಳು 10 ಬೆರಳುಗಳಿಗೆ ಉಂಗುರ, ಕೊರಳಿಗೆ ಹಗ್ಗದಂಥ ಸರ ಧರಿಸಿರುತ್ತಾರಲ್ಲಾ...?
ಚಿನ್ನದಿಂದ ಸ್ತ್ರೀಯರನ್ನು, ಸ್ತ್ರೀಪಡೆಯಿಂದ ಪುರುಷರನ್ನು ಸೆಳೆಯುವ ಉಪಾಯವಂತೆ.

ಹರಿತಸ, ಬೆಂಗಳೂರು
◆ ಈಗಿನ ಕಾಲದ ವಾನಪ್ರಸ್ಥಾಶ್ರಮ ಯಾವುದು?



'ವಾನ' (ಮಳೆ), ಪ್ರಸ್ಥ (ಶುಭಕಾರ್ಯ), ಶ್ರಮ ಮೂರನ್ನೂ ತೋರಿಸುವ ತೆಲುಗು ಚಿತ್ರಗಳು.

ಗೀತಾಶ್ರೀ, ಬೆಂಗಳೂರು
◆ ಹೆಂಡತಿ ಪತಿವ್ರತೆಯಾದರೆ ಗಂಡ?
ನಿರಾಳ!

ನಿರ್ಮಲಾ ಪಾಟೀಲ, ಬೆಳಗಾವಿ
◆ ಲಗ್ನವಾದ ಬಳಿಕ ಗಂಡ ಏಕೆ ಮೂಕನಾಗುತ್ತಾನೆ?
ಒಬ್ಬರು ಮಾತನಾಡುತ್ತಿರುವಾಗ ಮತ್ತೊಬ್ಬರು ಮಾತನಾಡುವುದು ಸಭ್ಯತೆ ಅಲ್ಲ.

■ ರಾಮ್